KATK010039232023

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ವಿಶೇಷ ಮೊಕದ್ದಮೆ ಸಂಖ್ಯೆ.474/2023**

ಪ್ರಾ.ಸಾ. ಃ **5**

ದೋ.ಸಾ. ಃ **8**

ದಿ.**13.11.2025**

ಹೆಸರು ಃ ಬೈಲಪ್ಪ

ತಂದೆಯ ಹೆಸರು ಃ ಶಿವಪ್ಪ

ವಯಸ್ಸು ಃ **18** ವರ್ಷ

ಉದ್ಯೋಗ ಃ ಚಾಲಕ

ವಾಸಸ್ಥಳ ಃ ನದಿಚಿನ್ನೂರು, ಗುಲ್ಬರ್ಗ ಜಿಲ್ಲೆ

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. ನಾನು 10 ನೇ ತರಗತಿಯನ್ನು ತುಮಕೂರು ಮಲ್ಲಸಂದ್ರ ಗ್ರಾಮದ ಶ್ರೀ ವಿಶ್ವಭಾರತಿ ಶಾಲೆಯಲ್ಲಿ ಮಾಡಿದ್ದೇನೆ. ನಾನು ಆ ಸಮಯದಲ್ಲಿ ಶ್ರೀ ವಿಶ್ವಭಾರತಿ ವಿದ್ಯಾರ್ಥಿ ನಿಲಯದಲ್ಲಿ ವಾಸ ಮಾಡುತ್ತಿದ್ದೆನು. ನನಗೆ ಆರೋಪಿ ಗೊತ್ತಿದೆ. ಅವರು ಹೆಸರು ಭರತ್ ಸರ್. ನಾನು ಶಾಲೆಗೆ ಸೇರುವಾಗ ಆರೋಪಿ ಹಾಸ್ಟೆಲ್ ನ ವಾರ್ಡನ್ ಆಗಿದ್ದರು. 3 ವರ್ಷಗಳ ಹಿಂದೆ ರಾತ್ರಿ ಹಾಸ್ಟೆಲ್ ನಲ್ಲಿ ಮಲಗಿದ್ದೆನು. ರಾತ್ರಿ ಮಲ್ಲಮ್ಮ ಮಿಸ್ ರವರು ಊಟ ಕೊಟ್ಟು ವಾಪಸ್ ಹೋದರು. ರಾತ್ರಿ 9.00 ಗಂಟೆಗೆ ನಾವು ಮಲಗಿದ್ದೆವು. ರಾತ್ರಿ 10.00 ಗಂಟೆಗೆ ದಾವಣಗೆರೆಯ ಹುಡುಗರು ಗಲಾಟೆ ಮಾಡುತ್ತಿದ್ದರು. ಆಗ ಆರೋಪಿ ಬಂದರು. ಹಾಸ್ಟೆಲ್ ನ ಹಿಂದುಗಡೆ ಹಾರ್ಟ್ ಪೇಷಂಟ್ ನ ಮನೆ ಇದೆ, ಕಿರುಚಬೇಡಿ ಎಂದು ಹೇಳಿದರು. ಆದರೂ ಮಕ್ಕಳು ಕಿರುಚಾಡಿದರು. ಭರತ್ ಸರ್ ಗೆ ಕೋಪ ಬಂದು ಹೊಡೆದರು. ಬೆಲ್ಟ್ ಮತ್ತು ಎಡಮಟ್ಟೆಯಿಂದ ಹೊಡೆದರು. ಸುಮಾರು 15 ಜನಕ್ಕೆ ಹೊಡೆದರು.

ನನಗೆ ಹೊಡೆದಿಲ್ಲ. ನನಗೆ ಆರೋಪಿ ಹೊಡೆದಿದ್ದಾರೆ ಮತ್ತು ಬಲತೊಡೆಗೆ ಪೆಟ್ಟು ಬಿದ್ದಿತ್ತು ಎಂದು ಪೋಲೀಸರ ಮುಂದೆ ಹೇಳಿಲ್ಲ. ನಾನು ಆಸ್ಪತ್ರೆಗೆ ಹೋಗುವುದಿಲ್ಲ ಎಂದು ಹೇಳಿದರೂ ದಾವಣಗೆರೆ ಹುಡುಗರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಬಿಇಒ ರವರು ನನ್ನನ್ನು ಕಾರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆಸ್ಪತ್ರೆಯಲ್ಲಿ ವೈದ್ಯರು ತಪಾಸಣೆ ಮಾಡಿದಾಗ ನನಗೆ ಗಾಯವಾಗಿರಲಿಲ್ಲ. ನಿಶಾನೆ ಪಿ14 ಫೋಟೋದಲ್ಲಿ ನಾನು ಮತ್ತು ಬಿಇಒ ಇದ್ದೇವೆ. ನನಗೆ ಏನು ಪೆಟ್ಟಾಗಿದೆ ಎಂದು ವಿಚಾರಿಸುತ್ತಿದ್ದರು. ನನಗೆ ಬಲತೊಡೆಗೆ ಪೆಟ್ಟಾಗಿದೆ ಎಂದು ದಾವಣಗೆರೆ ಹುಡುಗರು ಹೇಳಿದ್ದರಿಂದ ಬಿಇಒ ರವರಿಗೆ ಹೇಳಿದ್ದೇನೆ.

(ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ಭಾಗಶಃ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು/ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು).

**<u>ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :</u>**

**2.** ಗಲಾಟೆಯಾದ ದಿನ **21.11.2022** ರಂದು ಎಂದರೆ ನನಗೆ ನೆನಪಿಲ್ಲ. ಆರೋಪಿ ಮಲಗಿದ್ದ ನಮ್ಮನ್ನು ಎಬ್ಬಿಸಿ, ಸಾಲಾಗಿ ನಿಲ್ಲಿಸಿ, ಯಕ್ರೋ ಇಷ್ಟು ಬೇಗ ಮಲಗಿದ್ದೀರಾ, ನಾನು ಹೇಳಿದ ಮೇಲೆ ನೀವೆಲ್ಲಾ ಮಲಗಬೇಕು ಎಂದು ಹೇಳಿ ತೆಂಗಿನ ಎಡಮಟ್ಟೆಯಿಂದ ಮತ್ತು ಬೆಲ್ಟ್ ನಿಂದ ಹೊಡೆದರು ಎಂದರೆ ಸರಿಯಲ್ಲ. ಒಟ್ಟು **16** ಜನಕ್ಕಿಂತ ಜಾಸ್ತಿ ಜನರಿಗೆ ಪೆಟ್ಟುಗಳು ಬಿದ್ದಿತ್ತು, ನನಗೂ ಸಹ ಎಡಮಟ್ಟೆ ಮತ್ತು ಬೆಲ್ಟ್ ನಿಂದ ಹೊಡೆದಿದ್ದು ಬಲಗಾಲಿನ ತೊಡೆಗೆ ಪೆಟ್ಟು ಬಿದ್ದಿರುತ್ತದೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಕೊಟ್ಟಿದ್ದೇನೆಂದು ಹೇಳುವ ಹೇಳಿಕೆಯನ್ನು ನಿಶಾನೆ ಪಿ**32** ಎಂದು ಗುರುತಿಸಲಾಯಿತು. ನಾನು ನಿಶಾನೆ ಪಿ**32** ರಂತೆ ಹೇಳಿಕೆ ಕೊಟ್ಟಿದ್ದರೂ

ಆರೋಪಿಯನ್ನು ಈ ಕೇಸಿನಿಂದ ಬಚಾವು ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ.ಎಂ.ಸಿ.ಚಂದ್ರಯ್ಯ, ವಕೀಲರಿಂದ ಆರೋಪಿತರ ಪರವಾಗಿ :**

**3.** ನಮ್ಮ ಹಾಸ್ಟೆಲ್ ನಲ್ಲಿ 5 ರೂಮ್ ಗಳು ಇವೆ. ನಾನು ಎರಡನೇ ಮಹಡಿಯಲ್ಲಿ 1 ನೇ ರೂಮ್ ನಲ್ಲಿ ಇದ್ದೆನು. ನನ್ನ ರೂಮ್ ನಲ್ಲಿ ಐದಾರು ಮಂದಿ ಇದ್ದೆವು. ನನ್ನ ರೂಮಿನಲ್ಲಿ ನಾನು, ನನ್ನ ತಮ್ಮ, ನನ್ನ ಚಿಕ್ಕಪ್ಪನ ಮಗ, ಮಹಾಂತೇಶ ಮತ್ತು ಯಾದಗಿರಿಯ ಇಬ್ಬರು ಹುಡುಗರು ಇದ್ದೆವು. ನಾನು ರೂಮಿನಲ್ಲಿದ್ದಾಗ ಬೇರೆಯವರ ರೂಮಿನಲ್ಲಿ ಏನಾಗಿದೆ ಎಂದು ನನಗೆ ಗೊತ್ತಾಗುವುದಿಲ್ಲ. ದಾವಣಗೆರೆಯ ಹುಡುಗರು 2ನೇ ಮಹಡಿಯ 2 ಮತ್ತು 3ನೇ ರೂಮ್ ಗಳಲ್ಲಿದ್ದರು. ದಾವಣಗೆರೆಯ ಹುಡುಗರು ಗಲಾಟೆ ಮಾಡುವಾಗ ಆರೋಪಿ ಬಂದು ಎಡಮಟ್ಟೆ ಮತ್ತು ಬೆಲ್ಟ್ ನಿಂದ ಹೊಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

**(**ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು**).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು